

# ದೊಡ್ಡವರೆನ್ನಲು ಖುಷಿ ಯಡವಟ್ಟುಗಳು ಕಹಿ

ಮಕ್ಕಳಿಗೆ ನಾವು ಒದಗಿಸುವ ಸೌಕರ್ಯಗಳಲ್ಲಿ ಕಾಳಜಿಗೆ ಮೊದಲ ಸ್ಥಾನ. ಮಕ್ಕಳ ಜಾಣತನವನ್ನು ಮೆಚ್ಚುತ್ತಲೇ, ಕಂದಮ್ಮನ ಬಗ್ಗೆ ನಿಗಾ ವಹಿಸುವುದೂ ಅಗತ್ಯ.

■ ಸ್ವಯಂಪ್ರಭಾ

ಸುಷ್ಮಾ, ತನ್ನ ಮಗಳ ಕರಾಮತ್ತು ನೋಡಿ ಬೆಚ್ಚಿಬಿದ್ದಿದ್ದಳು. ವಿಷಯ ಇಷ್ಟು: ಮೊನ್ನೆ ಸಂಕ್ರಾಂತಿಗೆ ಮಗಳು ರಿಯಾ ತನ್ನ ಕಿವಿಗೆ ಪುಟಾಣಿ ಜುಮ್ಕಿ ಹಾಕ್ಕೊಂಡು, ಜರಿಲಂಗ ಏರಿಸಿಕೊಂಡು ಖುಷಿಖುಷಿಯಾಗಿ ಓಡಾಡುತ್ತಿದ್ದಳು. ಪಕ್ಕದ ಮನೆಗೂ ನೆಂಟರು–ಮಕ್ಕಳು ಬಂದಿದ್ದರಿಂದ ಮನೆಮುಂದೆ ಎಳೆಯರ ಗಲಾಟೆ ಭಾರೀ ಜೋರಾಗಿತ್ತು. ಎಲ್ಲರಿಗೂ ಈ ಹೊಸ ಜುಮ್ಕಿಯ ಬಗ್ಗೆ ಕುತೂಹಲ. ತನ್ನನ್ನು ಎಲ್ಲರೂ ಗಮನಿಸುತ್ತಿದ್ದಾರೆ, ತಾನು ದೊಡ್ಡವಳಾಗಿದ್ದೇನೆಂದು ಎಲ್ಲರೂ ಹೊಗಳುತ್ತಿದ್ದಾರೆ ಎಂಬ ಬಗ್ಗೆ ರಿಯಾಗೆ ಖುಷಿ. ಪಕ್ಕದ ಮನೆಯ ದೊಡ್ಡಕ್ಕ ಸುನೀತಾ ಕೇಳಿದಳು, 'ರಿಯಾ ಪುಟ್ಟಿ, ಈ ಜುಮುಕಿ ನನಗೆ ಕೊಡ್ತೀಯಾ... ಎಷ್ಟೊಂದು ಚೆನ್ನಾಗಿದೆ. ಕೊಡ್ತೀಯಾ...' ಎನ್ನುತ್ತ ಮುದ್ದು ಮಾಡಿದಳು. ಅರರೆ, ಅಕ್ಕನಿಗೆ ಕೊಡುವಷ್ಟು ದೊಡ್ಡವ್ಯಕ್ತಿಯಾ ತಾನು ಎಂದು ಬಗೆದ ರಿಯಾ, 'ಓ, ಅದಕ್ಕೇನಂತೆ, ಅಜ್ಜಿ ಇದನ್ನು ಕೊಡಿಸಿದ್ದು. ಇನ್ನೊಂದು ಕೇಳಿ ನಿಮಗೆ ಕೊಡುವೆ' ಎಂದು ಉದಾರ ಭರವಸೆ ನೀಡಿದಳು. ರಿಯಾ ಹೇಳಿದ ಈ ಡೈಲಾಗ್ ಅಕ್ಕಪಕ್ಕದಲ್ಲೆಲ್ಲ ಫೇಮಸ್ ಆಯಿತೆನ್ನಿ.

ಮಕ್ಕಳಿಗೆ ತಾವು ದೊಡ್ಡವರು ಎಂದು ಗುರುತಿಸಿಕೊಳ್ಳಲು ಬಹಳ ಆತುರ. ಯಾವಾಗ ದೊಡ್ಡವರಾದೇವೋ ಎಂಬ ಅವಸರ. ಇತ್ತೀಚಿಗಿನ ದಶಕಗಳಲ್ಲಿ ಮನೆಯಲ್ಲಿ ಯಾವುದೇ ವಿಚಾರದಲ್ಲಾದರೂ ಮಕ್ಕಳದ್ದೇ ಅಧ್ಯಕ್ಷತೆಯಾದ್ದರಿಂದ, ಅವರ ಅಹಂ ಬೆಳೆದಿರುತ್ತದೆ. ಅಲ್ಲದೆ ತಾವು ದೊಡ್ಡವರಾಗಿಯೇ ಬಿಟ್ಟಿದ್ದೇವೆ ಎಂಬ ಭಾವನೆಯಲ್ಲಿ ಅವರಿರುತ್ತಾರೆ. ಒಂದೇ ಮಗುವಿರುವ ಮನೆಯಾದರೆ, ಆ ಮಗುವೇ ಮನೆಯ ಕೇಂದ್ರ.

ವಾಸ್ತವ ಬೇರೆಯೇ ಇರುತ್ತದೆ. ಪುಟಾಣಿ ಮಕ್ಕಳು ಅಪ್ಪ ಅಮ್ಮನ ಆರೈಕೆಯಲ್ಲಿ ಸೀಮಿತ ಜಗತ್ತನ್ನು ಕಣ್ಣಾರೆ ನೋಡಿರುತ್ತಾರೆ. ತಮ್ಮ ಮನೆ, ಬಂಧುಗಳ ಮನೆ, ನೆರೆಹೊರೆಯ ಬಗ್ಗೆ, ಶಾಲೆಯ ಬಗ್ಗೆ ಅರಿತಿರುತ್ತಾರೆ. ಆದರೆ ಅವರ ಅಂಗೈಯಲ್ಲಿ ಇರುವ ಮೊಬೈಲು ಅವರಿಗೆ ಇಡೀ ಜಗತ್ತನ್ನೇ ತೋರಿಸುತ್ತದೆ. ಅಲ್ಲಿ ನೇರವಾಗಿ ಯಾವ ವಿಷಯಗಳನ್ನು ಗಮನಿಸುತ್ತಾರೋ, 'ಅದುವೇ ಸತ್ಯ' ಎಂದು ನಂಬುವ ಅವರಿಗೆ, ಅಲ್ಲಿ ಬರುವ ಮಾಹಿತಿಗಳ ಮೇಲೆ ಅಗಾಧವಾದ ವಿಶ್ವಾಸ ಇರುತ್ತದೆ. ಸಮಸ್ಯೆ ಸೃಷ್ಟಿಯಾಗುವುದು ಇಲ್ಲಿಯೇ. ಮಕ್ಕಳ ಈ ಮುಗ್ಧ ಮನೋಭಾವವನ್ನು ದುರ್ಬಳಕೆ ಮಾಡಿಕೊಳ್ಳುವ ಸಂದರ್ಭಗಳು ಇವೆ. ತಾನು ಭಾರೀ ಜಾಣ, ಜಾಣೆ ಎಂಬ ಹೆಮ್ಮೆಯ ಭಾವನೆಯನ್ನು ಉದ್ದೀಪಿಸುವ ಮೂಲಕ ಮಕ್ಕಳನ್ನು ದುರ್ಬಳಕೆ ಮಾಡಿಕೊಳ್ಳಲು ಯತ್ನಿಸುವವರೂ ಇರುತ್ತಾರೆ. ಚುರುಕುಮತಿಯ ಮಕ್ಕಳ ಬಗ್ಗೆಯೇ ಪೋಷಕರು ಹೆಚ್ಚೆಚ್ಚು ಕಾಳಜಿ ಮಾಡಬೇಕಾಗುತ್ತದೆ.

ಇತ್ತೀಚೆಗೆ 'ಚೈಲ್ಡ್ ರೈಟ್ಸ್ ಅಂಡ್ ಯು' (CRY ) ಮತ್ತು ಪುಣೆಯ 'ಚಾಣಕ್ಯ ನ್ಯಾಷನಲ್ ಲಾ ಯುನಿವರ್ಸಿಟಿ' ಜಂಟಿಯಾಗಿ ನಡೆಸಿದ ಸಮೀಕ್ಷೆಯೊಂದರಲ್ಲಿ, ಆನ್‌ಲೈನ್‌ನಲ್ಲಿ ಮಕ್ಕಳಿಗೆ ಪರಿಚಯವಾಗುವ ವಿಷಯಗಳ ಕುರಿತು ಆತಂಕದ ವಿಚಾರಗಳು ವ್ಯಕ್ತವಾಗಿವೆ. ಸಮೀಕ್ಷೆಯಲ್ಲಿ ಭಾಗವಹಿಸಿದ 424 ಪೋಷಕರ ಪೈಕಿ ಶೇ. 33 ಮಂದಿ, ತಮ್ಮ ಮಕ್ಕಳು ಆನ್‌ಲೈನ್‌ನಲ್ಲಿ ಇರುವಾಗ ಅಪರಿಚಿತರು ಅವರನ್ನು ಸಂಪರ್ಕಿಸಿ ಸ್ನೇಹದ ಕೋರಿಕೆ ಸಲ್ಲಿಸಿದ, ವೈಯಕ್ತಿಕ, ಕೌಟುಂಬಿಕ ಮಾಹಿತಿಗಳನ್ನು ಪಡೆಯಲು ಪ್ರಯತ್ನಿಸಿದ ಬಗ್ಗೆ ಹೇಳಿಕೊಂಡಿದ್ದಾರೆ. ಅಷ್ಟೇ ಅಲ್ಲ, ಆಗೀಗ ಲೈಂಗಿಕ ವಿಚಾರಗಳ ಕುರಿತು ಸಲಹೆ ಸೂಚನೆಗಳನ್ನು ಕೊಡುವ ಮೂಲಕ ಮಕ್ಕಳಿಗೆ ಹತ್ತಿರವಾಗಲು, ಅವರ ಮುಗ್ಧತೆಯನ್ನು ದುರ್ಬಳಕೆ ಮಾಡಲು ಯತ್ನಿಸಿದ್ದುಂಟು ಎಂದಿದ್ದಾರೆ. ಆನ್‌ಲೈನ್‌ನಲ್ಲಿ ಮಕ್ಕಳ ಮೇಲೆ ನಡೆಯುವ ದೌರ್ಜನ್ಯ (**online child sexual exploitation and abuse –OCSEA**) ಯಾವ ಪೋಷಕರನ್ನು ತಾನೇ ಕಂಗೆಡಿಸದು?

ಮಹಾರಾಷ್ಟ್ರ, ಕರ್ನಾಟಕ, ಪಶ್ಚಿಮ ಬಂಗಾಳ ಮತ್ತು ಮಧ್ಯ ಪ್ರದೇಶದ ಪೋಷಕರು ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದಾರೆ. ಈ ಪೋಷಕರಷ್ಟೇ ಅಲ್ಲದೆ, ನಾಲ್ಕು ರಾಜ್ಯಗಳಿಂದ 384 ಮಂದಿ ಶಿಕ್ಷಕರು ಹಾಗು ಪಶ್ಚಿಮ ಬಂಗಾಳ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ 107 ಮಂದಿ ಈ ಸಮೀಕ್ಷೆಯಲ್ಲಿ ತಮ್ಮ ಅನಿಸಿಕೆಗಳನ್ನು ದಾಖಲಿಸಿದ್ದಾರೆ.

ಮಕ್ಕಳಿಗೆ ಎಡತಾಕುವ ಅನವಶ್ಯಕ ವಿಚಾರಗಳನ್ನು ದೂರವಿಡುವುದು ಹೇಗೆ? ಸಮಸ್ಯೆಗಳು ಎದುರಾದರೆ ಪೋಷಕರು ಪೊಲೀಸರಿಗೆ ದೂರು ಕೊಡುತ್ತಾರೆಯೇ ಎಂಬ ಪ್ರಶ್ನೆಗೆ ಶೇ. 30ರಷ್ಟು ಪೋಷಕರು, 'ಹೌದು' ಎಂದು ಉತ್ತರಿಸಿದರೆ, ಉಳಿದ ಶೇ. 70 ಪೋಷಕರು, 'ಆತಂಕ ಇರುವುದು ಹೌದಾದರೂ ಈ ಬಗ್ಗೆ ಪೊಲೀಸರವರೆಗೆ ಹೋಗಿಲ್ಲ' ಎಂದು ಹೇಳಿದ್ದಾರೆ. ಇದಕ್ಕೆ ಸಂಬಂಧಿಸಿ ಏನೇನು ಕಾನೂನುಗಳಿವೆ ಎಂಬ ಮಾಹಿತಿಯೂ ಬಹುತೇಕ ಪೋಷಕರಿಗಿಲ್ಲ. ಪೊಲೀಸರ ಸಹವಾಸ ಬೇಡ ಎಂದು ಸುಮ್ಮನಾಗುವವರೇ ಹೆಚ್ಚು.

ಮಕ್ಕಳಿಗಾಗಿ ಸೌಕರ್ಯಗಳನ್ನು ಮಾಡುವುದರಲ್ಲಿಯೇ ಪೋಷಕರು ವ್ಯಸ್ತರಾಗಿರುತ್ತಾರೆ. ಆದರೆ ಮಕ್ಕಳಿಗೆ ಬೇಕಾಗುವ ಸೌಕರ್ಯಗಳ ಪೈಕಿ ಮುಖ್ಯವಾದುದು ಕಾಳಜಿ. ಅದಕ್ಕಾಗಿಯೇ ಹೆಚ್ಚಿನ ಸಮಯವನ್ನು ಮೀಸಲಿಡಬೇಕಾಗುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**